ಓ.ಎಸ್.ನಂ.15/2021

ಪಿ.ಡಬ್ಲೂಃ 1

ದಿನಾಂಕಃ 16/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ.ಆರ್. ವಕೀಲರಿಂದಃ**

6. ದಾವಾ ಶೆಡ್ಯೂಲ್ ಆಸ್ತಿ ನನ್ನ ಮಾವನಿಗೆ ಮಂಜೂರಾದ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಈಗ ದಾವಾ ಶೆಡ್ಯೂಲ್ ಆಸ್ತಿ 1 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ. ನನ್ನ ಮಾವನಿಗೆ ಮಂಜೂರು ಮಾಡಿದಂತಹ ದಾವಾ ಶೆಡ್ಯೂಲ್ ಆಸ್ತಿಯನ್ನು ಕೆ.ಎಸ್.ಎಸ್.ಐ.ಡಿ.ಸಿ. ಯವರು 1 ನೇ ಪ್ರತಿವಾದಿಯವರ ಹೆಸರಿನಲ್ಲಿ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸುಳ್ಳು. ದಾವಾ ಶೆಡ್ಯೂಲ್ ಆಸ್ತಿಯಲ್ಲಿ ವಿದ್ಯೂತ್ ಸಂಪರ್ಕ ಇದೆ. ಸದರಿ ವಿದ್ಯೂತ್ ಸಂಪರ್ಕ ನನ್ನ ಗಂಡನ ಹೆಸರಿನಲ್ಲಿ ಇದೆ. ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಈಗ ಯಾರು ವಿದ್ಯೂತ್ ಚಕ್ತಿ ಬಿಲ್ ಯಾರು ಪಾವತಿಸುತ್ತಿದ್ದಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ನನ್ನ ಗಂಡ ಮತ್ತು ಅವರ ತಮ್ಮನಾದ ಮಂಜುನಾಥ್ ರವರು 2 ನೇ ಪ್ರತಿವಾದಿಯವರಿಗೆ ಜಿ.ಪಿ.ಎ ಯನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ಜಿ.ಪಿ.ಎ. ಆಧಾರದ ಮೇರೆಗೆ 2 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯವರಿಗೆ ದಾವಾ ಶೆಡ್ಯೂಲ್ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಆ ರೀತಿಯಾಗಿ ದಾವಾ ಶೆಡ್ಯೂಲ್ ಆಸ್ತಿಯನ್ನು 1 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿದ ಕಾರಣದಿಂದ ಕೆ.ಎಸ್.ಎಸ್.ಐ.ಡಿ.ಸಿ. ಯವರು 1 ನೇ ಪ್ರತಿವಾದಿಯವರ ಹೆಸರಿನಲ್ಲಿ ದಾವಾ ಶೆಡ್ಯೂಲ್ ಆಸ್ತಿಯನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸುಳ್ಳು. ಈಗ ದಾವಾ ಶೆಡ್ಯೂಲ್ ಆಸ್ತಿಯಲ್ಲಿ ಏನು ಫ್ಯಾಕ್ಟರಿ ನಡೆಯುತ್ತಿದ್ದೆ ಎಂದು ನನಗೆ ಗೊತ್ತಿಲ್ಲ.

7. ನಾನು ಹೇಳಿದಂತಹ ಬಾಡಿಗೆದಾರರಾದ ರವಿ ಎಂಬುವವರು ಯಾವಾಗ ಮೃತ ಪಟ್ಟಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ನನ್ನ ಗಂಡನ ಸಹೋದರಿಯಾದ ಹೆಸರು ವಿಜಯಲಕ್ಷ್ಮೀ, ಶಾರದ, ಸರಸ್ವತಿ, ವಿಮಲ, ಪದ್ಮ ಮತ್ತು ಶಾಂತಲಕ್ಷ್ಮೀ ಎಂದರೆ ಸರಿ. ಸದರಿಯವರು ನನ್ನ ಜೊತೆ ಚೆನ್ನಾಗಿ ಇದ್ದಾರೆ. ದಿನಾಂಕ 06.11.2006 ರಂದು ವಿಜಯಲಕ್ಷ್ಮೀ, ಶಾರದ, ಸರಸ್ವತಿ, ವಿಮಲ, ಪದ್ಮ ಮತ್ತು ಶಾಂತಲಕ್ಷ್ಮೀ ಎಂಬುವವರು ಒಂದು ಪ್ರಮಾಣ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ದಾವಾ ಶೆಡ್ಯೂಲ್ ಆಸ್ತಿ 1 ನೇ ಪ್ರತಿವಾದಿಯವರಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ಸುಳ್ಳು. ದಾವಾ ಶೆಡ್ಯೂಲ್ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಕೂಡ 1 ಮತ್ತು 2 ನೇ ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ಪ್ರತಿಯುತ್ತರದಲ್ಲಿ 1 ನೇ ಪ್ರತಿವಾದಿಯವರು ದಾವಾ ಶೆಡ್ಯೂಲ್ ಆಸ್ತಿಯನ್ನು ಖರೀದಿಸಿದ ಬಗ್ಗೆ ಮತ್ತು ಅವರೇ ದಾವಾ ಶೆಡ್ಯೂಲ್ ಆಸ್ತಿಯ ಮಾಲೀಕರು ಎಂದು ತಿಳಿಸಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್